ದೇಶದ ನಗರಗಳಲ್ಲಿಯೂ ಕಾಣಸಿಗುತ್ತವೆ. ಹೆಚ್ಚಾಗಿ ಮೆಟ್ರೋಶಹರಗಳಲ್ಲಿನ ಕ್ರಿಶ್ಚಿಯನ್ನರಲ್ಲಿ ಸತ್ತವರ ಕುಟುಂಬಕ್ಕೆ ಕಾಫಿನ್ ಒದಗಿಸುವುದರಿಂದ ಹಿಡಿದು, ಚರ್ಚಿನ ಸ್ಮಶಾನದಲ್ಲಿ ಜಾಗ ಖರೀದಿಸುವುದೂ ಸೇರಿದಂತೆ ಮಣ್ಣು ಮಾಡುವವರೆಗಿನ ಎಲ್ಲವನ್ನೂ ಈ ಫ್ಯೂನರಲ್ ಡೈರೆಕ್ಟರುಗಳು ಕೈಕೊಳ್ಳುತ್ತಾರೆ. ಆದರೆ ಅತ್ಯಪ್ಪಟವಾಗಿ ಹಿಂದೂಸಂಸ್ಕಾರಕ್ಕೆಂದೇ ಹೇಳಿಮಾಡಿಸಿದ ಸೇವೆಯನ್ನೊದಗಿಸುವ ನನ್ನನ್ನು ಏನೆಂದು ಕರೆಯುವುದು? ಅಥವಾ ನನ್ನ ನಾನೇ ಏನೆಂದು ಹೆಸರಿಸಿಕೊಳ್ಳುವುದು?

ಜಿಜ್ಞಾಸೆ ಇದ್ದೇ ಇದೆ.

'ಸಂಸ್ಕಾರ್ ರೈಟ್ಸ್'ನ ಸೇವೆಯನ್ನು ಪಡೆಯಲಿಚ್ಛಿಸುವ ಮಂದಿ ಸಾಮಾನ್ಯವಾಗಿ ಶ್ರೀಮಂತರೇ ಆಗಿರುತ್ತಾರೆಂಬುದೂ ಪ್ರತೀತಿಯೇ. ಸಮಾಜದ ಎಲ್ಲ ವರ್ಗಗಳಿಗೂ ಆಗಬೇಕೆಂದು ನಾನಂದುಕೊಂಡರೂ ಮಂದಿ ಅಂದುಕೊಳ್ಳಬೇಕಷ್ಟೆ? ಹಾಗಾಗಿ ಆಗುತ್ತಿಲ್ಲ– ದುಡ್ಡಿರುವ ಹಣವಂತರೇ ನನ್ನ ಸೇವಾಸಕ್ತರಾಗಿದ್ದಾರೆ. ಇಲ್ಲೊಂದು ಅಡ್ಡಮಾತು ಹೇಳುವುದಾದರೆ, ಹಣವುಳ್ಳ ಮಂದಿಗೆ ತಮ್ಮ ಸಾವಿನ ಕುರಿತಾಗಿಯೂ ಇನ್ನಿರದ ಮುಂದಾಲೋಚನೆಯಿರುತ್ತದೆ. ಸತ್ತ ಮೇಲೆ ಈ ಭೂಮಿಯಲ್ಲಿ ತಮ್ಮ ಅಸ್ತಿತ್ವವಿರುವರೆಗೂ ತಾವು 'ಚೆನ್ನಾಗಿ' ಇರಬೇಕೆನ್ನುವುದನ್ನು ಬಯಸುತ್ತಾರೆ. ಚೆನ್ನಾಗಿರುವುದೆಂದರೆ ಚೆನ್ನಾಗಿ ಕಾಣುವುದು! ಅರ್ಥಾತ್, ಅಸುವಳಿದು ಸಾವಿಗೆ ತುತ್ತಾದ ತಮ್ಮ ಮೈ ಮರಗಟ್ಟಿದ ಕಳೇವರವಾಗಿಯೂ ಚಂದ ಕಾಣಬೇಕೆಂದು ಬಯಸುತ್ತಾರೆ. ಇದನ್ನು ಸತ್ತವರೇ ಬಯಸುತ್ತಾರೋ, ಅದಿ ಬದಿಯ ಮಂದಿ ಎಣಿಸುತ್ತಾರೋ... ತಿಳಿಯೆ! ಏನೇ ಇರಲಿ, ಒಟ್ಟಾರೆ ಬಯಸುತ್ತಾರೆ!! ಯಾರೇ ಸತ್ತರೂ ಹಾಸ್ಪಿಟಲಿನ ಮಂದಿ ಶವದ ಕಣ್ಣೆವೆ ಮುಚ್ಚಿಸಿ, ಮಲಗಿದ ಭಂಗಿ ಸರಿಗೊಳಿಸಿ, ಅಷ್ಟಿಷ್ಟು ಡ್ರೆಸ್ ಮಾಡಿರುತ್ತಾರಾದರೂ ಹೆಣವನ್ನು ಏಕ್‌ದಮ್ ಜೀವಂತ ವ್ಯಕ್ತಿಯೊಂದು ನಿದ್ರೆಯಲ್ಲಿರುವಂತೆ ತಿದ್ದಲಾರರಷ್ಟೆ? ಅಂದರೆ ಆಸ್ಪತ್ರೆಯ ಶುಶ್ರೂಕರಿಗೆ ಸತ್ತವರನ್ನು ಚೆನ್ನಾಗಿರಿಸುವ, ಅಥವಾ ಚೆನ್ನಾಗಿ ಕಾಣಿಸುವ 'ಮೇಕಪ್' ಬರುವುದಿಲ್ಲ. ಹೊಸಕಾಲದ ಮಂದಿ ಪಾರ್ಥಿವಶರೀರದಲ್ಲೂ ಜೀವಂತಿಕೆಯನ್ನು ಕಾಣಬಯಸುತ್ತಾರಾಗಿ, 'ಶವಪ್ರಸಾಧನ'ವೆಂಬ ಹೊಸತೇ ಕಾಯಕ ಇತ್ತಿತ್ತಲಾಗಿ ಚಾಲ್ತಿಗೆ ಬಂದಿದೆ. ಭಾರತದಾಚೆಯ ಶ್ರೀಮಂತ ದೇಶಗಳಲ್ಲಿ ಹೀಗೆ ಶವಸಿಂಗಾರಕ್ಕೆಂದೇ ಮಂದಿಯಿರುತ್ತಾರೆ! ಒಂದರ್ಥದಲ್ಲಿ ಇವರು ಬ್ಯುಟೀಶಿಯನ್ ಮಂದಿ. ಇವರನ್ನು 'ಮಾರ್ಟೀಸಿಯನ್ಸ್' ಅನ್ನಲಾಗುತ್ತದೆ ಇಷ್ಟಕ್ಕೂ, 'ಸಂಸ್ಕಾರ್ ರೈಟ್ಸ್'ನ ಸೇವೆ ಪಡೆಯಲಿಚ್ಛಿಸುವ ಜನರು ನಮ್ಮ 'ಮಾರ್ಟಿಸಿಯನ್ ಸರ್ವಿಸ್'ಗೆಂದೇ ನಮ್ಮೆದುರು ಮುಗಿಬೀಳುವುದಿದೆ. ಸತ್ತವರ ಶೃಂಗಾರ ಕೈಕೊಳ್ಳುವ ಹತ್ತಾರು ಬಗೆಯ ಪ್ರಸಾಧನವನ್ನು ನಾವು ಮಾಡುತ್ತೇವೆ. ಇದರಲ್ಲಿ ಹೆಚ್ಚುಕಮ್ಮಿ ನನ್ನ ಕೈಚಳಕವೇ ಜಾಸ್ತಿ ಅನ್ನಬೇಕು! ನಾನು ಕೈಯಿಕ್ಕಿದರೆ ಸಾಕು, ಹೆಣವು ಹೆಣವೇ ಅನ್ನಿಸದೆಂದು ಮಂದಿ ಕೊಂಡಾಡುವುದಿದೆ! ಭಾರೀ ಶವಶಿಲ್ಪಿಯೆಂದು ಬಿರುದಿತ್ತಿದ್ದಾರೆ!!

ಇನ್ನು, ಕಟಕ್ ನಗರದ ಕುಣಾಲ ಮೊಹಂತಿ ಅಂತೆಂಬ ಮನುಷ್ಯ ನನ್ನ ಹಿಂದೆ ಒಲ್ಲೆಂದರೂ ದುಂಬಾಲು ಬಿದ್ದುದು ಈ ಕಾರಣಕ್ಕೇನೆ. ಇಲ್ಲದಿದ್ದಲ್ಲಿ, 'ಎಷ್ಟು ಖರ್ಚಾದರೂ ಸೈಯಿ... ನಮಗೆ ಕೋವಲನ್ ಅವರ ಅಪಾಇಂಟ್ಮೆಂಟ್ ಬೇಕೇಬೇಕು...' ಎಂದು ನನ್ನ ಸೆಕ್ರೆಟರಿ ದೀಕ್ಷಾಳಲ್ಲಿ ಮೆಸೇಜು ಬಿಡುತ್ತಿದ್ದನೆ?

ಹೌದು... ನಾನು ಹೆಣ ಮುಟ್ಟಿದೆನಾದರೆ ದುಪ್ಪಟ್ಟು ದುಡ್ಡೆಣಿಸುತ್ತೇನೆ! ಸಾವೆಂಬ ಸಾವಿನಲ್ಲೂ ವ್ಯವಹಾರವೇ ಎಂಬ ಪ್ರಶ್ನೆ ನನ್ನೊಳಗೂ ಆಗೀಗ ತಲೆದೋರುತ್ತದೆ. ನೀವೇ ಹೇಳಿ: ಸಾವನ್ನು ಸಾವೆನಿಸದಂತೆ ತೋರಿಸುವುದೇನು ಸುಲಭವೇ?!

## 5

ಯಾರು ಸತ್ತಿದ್ದೆಂದು ಸಹ ಗೊತ್ತಿರದೆ, ಮಹಾರಾಷ್ಟ್ರದ ಗೃಹಸಚಿವರ ಆದೇಶದ ಮೇರೆಗೆ ಕಟಕ್ ನಗರಕ್ಕೆ ಬಿಟ್ಟಿದ್ದು ಬಿಟ್ಟು, ಟೀಮು ಕಟ್ಟಿಕೊಂಡು ಹೊರಟಿದ್ದಷ್ಟೆ... ಮೃತರ ಕುರಿತಾಗಿ ವಿವರಗಳೇ